ಶ್ರೀ ಹೆಚ್.ಡಿ.ರೇವಣ್ಣ: ಯಾವ ರೂಪದಲ್ಲಿ ತರಬೇಕೆಂದು ಹೇಳಿ. ಅರ್ಧಗಂಟೆ ಚರ್ಚೆಗೆ ನೀವೇ ನಿಗದಿಪಡಿಸಿ. ಇವತ್ತು ಐದು ಕಂಪನಿಗಳು ಮುಳುಗಿ ಹೋಗುತ್ತಿವೆ. ಇವತ್ತು ಎರಡು ಗಂಟೆಗಳ ಕಾಲ ಕರೆಂಟ್ ಸಿಗುತ್ತಿಲ್ಲ. ಒಂದು ಟಿ.ಸಿ.ಕೆಳಿದರೆ ಮೂರು ತಿಂಗಳು ನಾಲ್ಕು ತಿಂಗಳುಗಳಾದರೂ ಟಿ.ಸಿ. ಸಿಗುತ್ತಿಲ್ಲ. ಈ ಸರ್ಕಾರ ಲೂಟಿ ಮಾಡುತ್ತಿರುವುದನ್ನು ನಾವು ಹೇಳಿದರೆ ಬೇಡವೆಂದರೆ, ಬಿಟ್ಟು ಬಿಡಿ ಇಲ್ಲವಾದರೆ.

ಅಧ್ಯಕ್ಷರು: ದಯವಿಟ್ಟು ಕುಳಿತುಕೊಳ್ಳಿ ಅವರು ಚರ್ಚೆಯನ್ನು ಪ್ರಾರಂಭ ಮಾಡಲಿ.

ಶ್ರೀ ಹೆಚ್.ಡಿ.ರೇವಣ್ಣ: ದಯವಿಟ್ಟು ನೀವು ಅರ್ಧಗಂಟೆ ಚರ್ಚೆಗೆ ಅವಕಾಶ ಕೊಡಿ ಇಲ್ಲವಾದರೆ ಧರಣಿ ಕೂರಬೇಕಾಗುತ್ತದೆ.

ಅಧ್ಯಕ್ಷರು: ನಿಯಮದಲ್ಲಿ ಅವಕಾಶ ಎಲ್ಲಿದೆ?

ಶ್ರೀ ಹೆಚ್.ಡಿ.ರೇವಣ್ಣ: ಆನಂತರ ಅರ್ಧಗಂಟೆ ಚರ್ಚೆಗೆ ಅವಕಾಶ ಕೊಡಿ.

ಅಧ್ಯಕ್ಷರು: ನಿಯಮದಲ್ಲಿ ಇಲ್ಲದಿರುವುದನ್ನು ಕೊಡಿ ಎಂದರೆ ಆಗುವುದಿಲ್ಲ.

ಶ್ರೀ ಹೆಚ್.ಡಿ.ರೇವಣ್ಣ: ಬರಗಾಲದ ಚರ್ಚೆಯಾದ ನಂತರ ಅರ್ಧಗಂಟೆ ಅವಕಾಶ ಕೊಡಿ.

ಶ್ರೀ ಟಿ.ಬಿ.ಜಯಚಂದ್ರ: ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡುವುದಕ್ಕೆ ಅವಕಾಶ ಕೊಡುತ್ತಿರಾ?

ಅಧ್ಯಕ್ಷರು: ಮಾತನಾಡಿ. ನೀವು ಬೇರೆ ರೂಪದಲ್ಲಿ ಚರ್ಚೆಗೆ ತನ್ನಿ ಅವಕಾಶ ಕೊಡುತ್ತೇನೆ.

ಶ್ರೀ ಯು.ಟಿ.ಖಾದರ್: ಮಾನ್ಯ ಅಧ್ಯಕ್ಷರೆ, ರಾಷ್ಟ್ರ ಪತಿಯಾಗಿ ನೂತನವಾಗಿ ಮಾನ್ಯ ಪ್ರಣಬ್ ಮುಖರ್ಜಿಯವರು ಆಯ್ಕೆಯಾಗಿದ್ದಾರೆ. ಅವರನ್ನು ಅಭಿನಂದಿಸುವುದು ನಮ್ಮ ಕರ್ತವ್ಯವಾಗಿದ್ದು, ಅವರನ್ನು ಅಭಿನಂದಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು: ಪ್ರಮಾಣ ವಚನ ಸ್ವೀಕರಿಸಿದ ನಂತರ ಅಭಿನಂದನೆ ಮಾಡುವುದು ಸೂಕ್ತ.

ಶ್ರೀ ಸಿದ್ದರಾಮಯ್ಯ: ಫಲಿತಾಂಶ ಬಂದಿರುವ ಕಾರಣ ಈಗಲೇ ಅಭಿನಂದನೆ ಮಾಡೋಣ. ಪ್ರಮಾಣವಚನವನ್ನು ಅವರು 25ನೇ ತಾರೀಖಿಗೆ ತೆಗೆದುಕೊಳ್ಳುತ್ತಾರೆ.

ಅಧ್ಯಕ್ಷರು: ಅಂದೇ ಅಭಿನಂದನೆ ಮಾಡೋಣ.

ಶ್ರೀ ಸಿದ್ದರಾಮಯ್ಯ: Declareಆದ ಮೇಲೆ he is the elected president only.

ಶ್ರೀ ಎಸ್.ಸುರೇಶ್ ಕುಮಾರ್: That may not be proper, ಹೇಗಿದ್ದರೂ ಅವರು ಪ್ರಮಾಣ ವಚನ ತೆಗೆದುಕೊಳ್ಳುವ ದಿವಸ ಸದನ ನಡೆಯುವ ಕಾರಣದಿಂದ ಆ ದಿನದಂದೇ ಅಭಿನಂದನೆ ಮಾಡೋಣ.

ಶ್ರೀ ಸಿದ್ದರಾಮಯ್ಯ: What is wrong?

ಶ್ರೀ ಎಸ್.ಸುರೇಶ್ ಕುಮಾರ್: 25ನೇ ತಾರೀಖಿನಂದು ಮಾಡೋಣ. That is not proper, wrong ಎನ್ನುವುದು ಪ್ರಶ್ನೆ ಅಲ್ಲ.

ಶ್ರೀ ಸಿದ್ದರಾಮಯ್ಯ: How is it not proper?

ಶ್ರೀ ಎಸ್.ಸುರೇಶ್ ಕುಮಾರ್: ಅವರು ರಾಷ್ಟ್ರ ಪತಿಗಳ ಭವನಕ್ಕೆ ಹೋಗಿ ಪ್ರಮಾಣ ವಚನ ಸ್ವೀಕರಿಸುವ ದಿವಸ ನಾವು ಅಭಿನಂದನೆ ಸಲ್ಲಿಸೋಣ.

ಶ್ರೀ ಸಿದ್ದರಾಮಯ್ಯ: The moment he is elected, result is declared, we have to congratulate him.

ಶ್ರೀ ಎಸ್.ಸುರೇಶ್ ಕುಮಾರ್: Congratulationಬೇರೆ ಬೇರೆ forumನಲ್ಲಿ ಮಾಡೋಣ.Not from this forum.

ಶ್ರೀ ಸಿದ್ದರಾಮಯ್ಯ: ಅಸೆಂಬ್ಲಿಯಲ್ಲಿ ಮಾಡಿದರೆ ಏನಾಗುತ್ತದೆ? Even in the Assembly also you can do it. we leave it to your discretion.

ಶ್ರೀ ಎಸ್.ಸುರೇಶ್ ಕುಮಾರ್: ನಾವು ಅವರ ಜೊತೆಯಲ್ಲಿಯೇ ಸೇರಿಕೊಂಡು ಖಂಡಿತವಾಗಿ ಅಭಿನಂದನೆ ಸಲ್ಲಿಸುತ್ತೇವೆ. but on the day when he takes oath.

ಶ್ರೀ ಸಿದ್ದರಾಮಯ್ಯ: ಇದಕ್ಕೆ ತಕರಾರು ತೆಗೆಯಬೇಕಾಗಿಲ್ಲ ಮಾನ್ಯ ಸಂಸದೀಯ ಸಚಿವರೇ, ಇದಕ್ಕೆ ಏಕೆ objectionಹಾಕುತ್ತೀರಾ?

ಶ್ರೀ ಎಸ್.ಸುರೇಶ್ ಕುಮಾರ್:objectionಅಲ್ಲ.

ಶ್ರೀ ಸಿದ್ದರಾಮಯ್ಯ: Is it not a fact that he is elected? Result is declared, what more is required? Everybody is congratulating him.

ಶ್ರೀ ಎಸ್.ಸುರೇಶ್ ಕುಮಾರ್: Oathತೆಗೆದುಕೊಳ್ಳುವ ಮುಂಚೆ ಅಭಿನಂದನೆ ಸಲ್ಲಿಸುವುದಾದರೆ, I have no objection.

ಅಧ್ಯಕ್ಷರು: ಅಭಿನಂದನೆ ಮಾಡಿ.